ಖಾಲಿಯಾಗುವ ತನಕ ಇಲ್ಲೇ ಠಿಕಾಣಿ ಹೂಡಬಹುದು ಸರ್' ಎಂದರು ಶ್ರೀಕಾಂತ್. ಅಲ್ಲಲ್ಲಿ ಮರೆಯಲ್ಲಿ ನಿಂತು, ಎದ್ದು ಓಡಾಡಿ, ವಿವಿಧ ಭಂಗಿಗಳನ್ನು ಪೋಸು ಕೊಟ್ಟ ಜೋಡಿಗಳು ಸ್ವಲ್ಪ ಹೊತ್ತು ಕೂತಿದ್ದು ಹಾಗೆ ಗೊಣಗುತ್ತಾ ಎದ್ದು ಮುಂದೆ ಹೊರಟವು. ನಾವು ತೊಲಗಿದ ಮೇಲೆ ತಿರುಗಿ ಬಂದು ಅವುಗಳ ಬೇಟೆಯನ್ನು ಮರದಿಂದ ಇಳಿಸಿ ಬೇರೆ ಕಡೆಗೆ ಕೊಂಡೊಯ್ಯುವ ಉಪಾಯವೂ ಅದು ಇದ್ದೀತು. ಆ ದಿನ ನಮಗೆ ಸತ್ತ ಪ್ರಾಣಿಯ ವಾಸನೆ ಬಿಟ್ಟರೆ ಬೇರೇನೂ ಕಾಣಿಸಲಿಲ್ಲ.

ತಾವು ಕೊಂದು ತಂದ ಪ್ರಾಣಿಗಳನ್ನು ಪಕ್ಕಾ ಜೋಪಾನ ಮಾಡಿಟ್ಟುಕೊಳ್ಳುವ ಕಲೆ ಚಿರತೆಗಳಿಗೆ ಕರಗತ. ಚಾಣಾಕ್ಷ ಚಿರತೆಗಳ ಕೈಯಿಂದ ಆಹಾರವನ್ನು ಕದಿಯುವುದು ಅಷ್ಟು ಸಲೀಸಲ್ಲ. ತಮ್ಮ ಬೇಟೆಗಳನ್ನು ಎಷ್ಟು ದೂರವಾದರೂ, ಎಷ್ಟೇ ಎತ್ತರದ ಮರದ ತುದಿಗೂ ಹೊತ್ತುಕೊಂಡು ಓಡುವ ಕುಶಲತೆ ಇವುಗಳಿಗೆ ಗೊತ್ತು. ತಮಗಿಂತಲೂ ಭಾರವಾದ ಪ್ರಾಣಿಗಳನ್ನು ಕೇವಲ ಬಾಯಲ್ಲೇ ಕಚ್ಚಿ ಹಿಡಿದು, ನೇರ ಬೆಳೆದು ನಿಂತ ಮರಗಳನ್ನು ಚಕಚಕಾಂತ ಹತ್ತಿ ಇವು ಹೋಗಬಲ್ಲವು. ಪ್ರಕೃತಿ ಇವುಗಳಿಗೆ ನೀಡಿರುವ ಶಕ್ತಿ ಮತ್ತು ಕೌಶಲ್ಯ ನಿಜಕ್ಕೂ ಬೆರಗು ಹುಟ್ಟಿಸುತ್ತದೆ.

ಮತ್ತೊಂದು ಸಲ ಹರಿಯುವ ಸಣ್ಣ ಹಳ್ಳದ ಕಡೆಯಿಂದ ರಕ್ತದವಾಸನೆ ಬರುತ್ತಿದೆ ಎಂದು ಹೇಳಿದ್ದ. ಹಿಂದಿನ ದಿನ ರಾತ್ರಿಯೇ ಈ ಖತಲ್ ನಡೆದಿತ್ತಾದರೂ ಕೊಂದವರು ಯಾರು? ಎಂಬುದು ಖಚಿತವಾಗಿರಲಿಲ್ಲ. ಆ ಹಳ್ಳದಲ್ಲಿ ಏನೋ ಎಡವಟ್ಟಾಗಿದೆ. ಯಾವುದೋ ಒಂದು ಪ್ರಾಣಿಯ ಹತ್ಯೆಯಂತೂ ಆಗಿದೆ. ನೋಡೋಣ ಎಂದು ಮಂಜುಗೆ ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೊರಟ. ಬಹಳ ಕಷ್ಟಪಟ್ಟು ಹಳ್ಳದಲ್ಲಿ ಇಣಕಿ ಇಣುಕಿ ನೋಡಿದೆವು. ಪೊದೆಗಳು ಬೆಳೆದ ಕಾರಣ ಯಾವುದು ಸ್ಪಷ್ಟವಿರಲಿಲ್ಲ. ನೆನ್ನೆಯಷ್ಟೇ ಹತ್ಯೆ ಜರುಗಿದ್ದ ಕಾರಣ ಕೆಟ್ಟ ವಾಸನೆಯೂ ಮೂಡಿರಲಿಲ್ಲ. ಕಷ್ಟಬಿದ್ದು ತಿಣುಕಾಡಿ ನೋಡಿದಾಗ ಕಾಡೆಮ್ಮೆಯ ಕೋಡುಗಳು ಹಳ್ಳದಲ್ಲಿ ಕಾಣಿಸಿದವು. ಕೊಂಚ ಎತ್ತರದಲ್ಲಿ ಜೀಪು ನಿಲ್ಲಿಸಿಕೊಂಡು ನೋಡುವ ಜಾಗ ಹಿಗ್ಗಿಸಿಕೊಂಡಾಗ ಭಾರಿ ಎಮ್ಮೆಯ ಮೃತದೇಹ ಕಾಣಿಸಿತು.

ಇದನ್ನು ಕೊಂದ ಪ್ರಾಣಿ ಈಗ ಬಂದೇ ಬರುತ್ತದೆ ಎಂದು ಖಚಿತ ಮಾಡಿಕೊಂಡು ಅಲ್ಲೇ ಒಂದು ಗಂಟೆ ಕಾದೆವು. ಸದ್ಯಕ್ಕೆ ಯಾವ ಪ್ರಾಣಿಯೂ ಬರಲಿಲ್ಲ. ಕೊನೆಗೆ ನೋಡುವಾಗ ದೂರದಲ್ಲೊಂದು ಚಿರತೆ ಕಾಣಿಸಿತು. ನಾವು ಅದರ ಕಡೆಗೆ ಪಟ ತೆಗೆಯುವಾಗ ನಮ್ಮ ಬೆನ್ನ ಹಿಂದೆಯೇ ಚರಪರ ಚಲಿಸುವ ಸದ್ದೊಂದು ಕೇಳಿ ಬಂತು. ಸರಕ್ಕೆಂದು ತಿರುಗಿ ಅತ್ತ ನೋಡುವಾಗ ಗಡವ

